## || ಶ್ರೀ ಕೋದಂಡ ರಾಮಚಂದ್ರೋ ವಿಜಯತೇ ||



ಕಪಿಪಿಟಕ ಧುರೀಣಃ ಕಾರ್ಮುಕನ್ಯಸ್ತಬಾಣಃ ಕ್ಷಪಿತದಿತಿಜ ಸೈನ್ಯಃಕ್ಷತ್ರಿಯೇಷ್ವಗ್ರಗಣ್ಯಃ ।

ಜಲಧಿರಚಿತಸೇತುರ್ಜಾನಕೀತೋಷಹೇತುಃ ಪಥಿ ಪಥಿ ಗುಣಸಾಂದ್ರಃ ಪಾತು ಮಾಂ ರಾಮಚಂದ್ರಃ ॥

ಸ್ವಸ್ತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕ ಗುಣಸಂಪನ್ನ ಪದವಾಕ್ಯಪ್ರಮಾಣ ಪಾರಾವಾರ ಪಾರಂಗತ ಸರ್ವತಂತ್ರ ಸ್ವತಂತ್ರ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗನಿರತ ಶ್ರೀಮದ್ಭೈಷ್ಮೀಸತ್ಯಾಸಮೇತ ಶ್ರೀಕೃಷ್ಣಪಾದಪದ್ಮಾರಾಧಕ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವರಮತೋದ್ಧಾರಕ ಶ್ರೀ ಭಂಡಾರಕೇರಿ ಶ್ರೀ ಸತ್ಯತೀರ್ಥ ಶುಭಸಂಪ್ರದಾಯ ಪ್ರವರ್ತಕರಾದ ಹಾಗೂ ಅಷ್ಟೋತ್ತ ಷ್ಟ ಶ್ರೀಮತ್ ಪಲಿಮಾರು ಮಠೀಯ ಶ್ರೀ ಹೃಷೀಕೇಶತೀರ್ಥ ಶುಭಸಂಪ್ರದಾಯ ಪ್ರವರ್ತಕರಾದ ಉಡುಪಿ ಶ್ರೀ ಭಂಡಾರಕೇರಿ ಹಾಗೂ ಶ್ರೀ ಪಲಿಮಾರು ಉಭಯ ಮಠಾಧೀಶರಾದ ಶ್ರೀ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ

## ಶ್ರೀ ವಿದ್ಯೇಶತೀರ್ಥ ಶ್ರೀಪಾದಂಗಳವರು

ಮಾಡುವ ನಾರಾಯಣ ಸ್ಮರಣೆಗಳು

ನಾವು ಶ್ರೀ ಸರ್ವಜ್ಞಾಚಾರ್ಯ ಕರಕಮಲಾರ್ಚಿತ ಶ್ರೀ ಸೀತಾಲಕ್ಷ್ಮಣ ಶ್ರೀ ಕೋದಂಡರಾಮಚಂದ್ರ ದೇವರ ಪೂಜಾ-ಜಪ ಸಚ್ಛಾಸ್ತ್ರ ಪ್ರವಚನಾದಿ ಸ್ವಾಶ್ರಮೋಚಿತ ಕರ್ಮಾನುಷ್ಠಾನ ನಿರತರಾಗಿ ಕುಶಲಿಗಳಿದ್ದೇವೆ. ಸಂಪ್ರತಿ ಇದೇ ಬರುವ ಶ್ರೀಖರ ಸಂವತ್ಸರದ ಆಷಾಢ ಬಹುಳ ಪಂಚಮಿ (ಶ್ರೀ ಜಯತೀರ್ಥರ ಮಧ್ಯಾರಾಧನೆ) ಯಂದು ತಾ|| ೨೦-೦೭-೨೦೧೧, ಶ್ರೀರಂಗ ಕ್ಷೇತ್ರದ ಭಂಡಾರಕೇರಿ ಮಠದಲ್ಲಿ ೩೨ ನೇ ಚಾತುರ್ಮಾಸ್ಯ ವೃತ ದೀಕ್ಷೇಯನ್ನು ಸ್ವೀಕರಿಸಿ ಭಾದ್ರಪದ ಪೂರ್ಣಿಮಾ ಪರ್ಯಂತ ಚಾತುರ್ಮಾಸ್ಯ ವೃತಾನುಷ್ಠಾನ ಕೈಗೊಳ್ಳುತ್ತೇವೆ.

ಈ ಶುಭ ಸಂದರ್ಭದಲ್ಲಿ ನಡೆಯಲಿರುವ **"ತತ್ತ್ವ ಮಂಜರೀ"** ಮತ್ತು **" ಶ್ರೀಕೃಷ್ಣಚಾರಿತ್ರ್ಯಮಂಜರೀ"** ಪಾಠ ಪ್ರವಚನಗಳಲ್ಲಿ ಹಾಗೂ ಪೂಜಾ ಸಂದರ್ಶನಾದಿಗಳಲ್ಲಿ ತಾವು ಭಾಗವಹಿಸಿ ನಮ್ಮ ಉಪಾಸ್ಯ ಮೂರ್ತಿಯಾದ ಶ್ರೀ ಕೋದಂಡರಾಮಚಂದ್ರ ದೇವರ ಸಂದರ್ಶನ, ತೀರ್ಥ ಪ್ರಸಾದ, ಫಲ-ಮಂತ್ರಾಕ್ಷತೆಗಳನ್ನು ಸ್ವೀಕರಿಸಿ, ಮಧ್ವಪ್ರಿಯ ಶ್ರೀ ಸೀತಾಪತಿ ಶ್ರೀ ಕೋದಂಡರಾಮಚಂದ್ರ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ.

**ಇತ್ಯನೇಕ ನಾರಾಯಣ ಸ್ಮರಣೆಗಳು**

**ಶ್ರೀ ವಿದ್ಯೇಶತೀರ್ಥಃ**

**<u>ಚಾತುರ್ಮಾಸ್ಯ ಮೊಕ್ಕಾಂ</u>**

**ಶ್ರೀ ಶ್ರೀ ವಿದ್ಯೇಶ ತೀರ್ಥ ಶ್ರೀಪಾದರು,**

**ಭಂಡಾರಕೇರಿ ಮಠ, ಉತ್ತರ ಚೈತ್ರ ರಥವೀಧಿ**

**ಶ್ರೀರಂಗಂ , ತಮಿಳುನಾಡು**